ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು- 2020-21ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ಡೀನ್, ಕಾವಾ, ಮೈಸೂರು ರವರ ಪತ್ರ ಸಂಖ್ಯೆ:ಸಿಎವಿ/ಸಿ.1/ಕ್ರಿಯೋ/ 2020-21, ದಿನಾಂಕ:18-06-2020.

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ ಡೀನ್, ಕಾವಾ, ಮೈಸೂರು ಇವರು 2020-21ನೇ ಸಾಲಿನಲ್ಲಿ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಮೈಸೂರು ಇವರಿಗೆ ಲೆಕ್ಕಶೀರ್ಷಿಕೆ 2205-00-101-0-02 ರಲ್ಲಿ (ವೇತನ ಮತ್ತು ಕಚೇರಿ ನಿರ್ವಹಣೆ) ರೂ.355.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಅನುದಾನಕ್ಕೆ ಕಾರ್ಯಕ್ರಮವಾರು ಕರಡು ಕ್ರಿಯಾಯೋಜನೆ ರೂಪಿಸಿ, ಅನುಷ್ಠಾನಗೊಳಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಸಂವಾ 194 ಕಸಧ 2020, ಬೆಂಗಳೂರು, ದಿನಾಂಕ: 22 -07-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು- 2020-21ನೇ ಸಾಲಿನ ವಾರ್ಷಿಕ ಕ್ರಿಯಾಯೋಜನೆಗೆ ಅನುಬಂಧದಲ್ಲಿ ಸೂಚಿಸಿರುವಂತೆ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ಆರ್ಥಿಕ ಇಲಾಖೆಯು ಕಾಲ-ಕಾಲಕ್ಕೆ ಹೊರಡಿಸುವ ಆರ್ಥಿಕ ಮಿತವ್ಯಯ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಹುದ್ದೆಗಳ ಸೃಜನೆ, ವಾಹನ ಮತ್ತು ಪೀಠೋಪಕರಣಗಳ ಖರೀದಿ ಇತ್ಯಾದಿ ಒಳಗೊಂಡಿದ್ದಲ್ಲಿ, ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿ ಪೂರ್ವಾನುಮತಿ ಪಡೆದು, ಕ್ರಮ ಕೈಗೊಳ್ಳುವುದು.

2. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 91 ವೆಚ್ಚ-7/2020, ದಿನಾಂಕ:30-05-2020ರಂತೆ 2020-21ನೇ ಸಾಲಿನ ಆಯವ್ಯಯದಲ್ಲಿ ಚಾಮರಾಜೇಂದ್ರ ದೃಶ್ಯಕಲಾ ಕಾಲೇಜಿನ ಯೋಜನೆಗಳಿಗೆ ಎದುರಾಗಿ ಒದಗಿಸಿರುವ ಅನುದಾನವನ್ನು ಸರ್ಕಾರದಿಂದ ಪ್ರತ್ಯಾಯೋಜಿಸಿ ಮಾಡಿರುವ ಯೋಜನೆಗಳ ಎದುರಾಗಿ ನವೆಂಬರ್ ೨೦೨೦ ರವರೆಗೆ ಪರಿಷ್ಕೃತ ಅಂದಾಜಿನ ಅರ್ಧದಷ್ಟು ಮೊತ್ತವನ್ನು ಮಾತ್ರ ಬಳಸಿಕೊಳ್ಳತಕ್ಕದ್ದು.

3. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 91 ವೆಚ್ಚ-7/2020, ದಿನಾಂಕ:30-05-2020ರಂತೆ ವೇತನಕ್ಕೆ ಸಂಬಂಧಿಸಿದಂತೆ ಏಪ್ರಿಲ್, ಮೇ, ತಿಂಗಳಿಗೆ ಬಿಡುಗಡೆ ಮಾಡಿರುವುದೂ ಸೇರಿದಂತೆ ಆಯವ್ಯಯದ 8/12 ಭಾಗದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಬಹುದಾಗಿದೆ. ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಮೊತ್ತವನ್ನು ಹೊರತುಪಡಿಸಿ ಉಳಿದಿರುವ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಬಹುದಾಗಿದೆ. ಈ ಸೂಚನೆಯು ಹೆಚ್.ಆರ್.ಎಂ.ಎಸ್ ನಿಂದ ಹೊರಗೆ ವೇತನ ಸೆಳೆಯುವ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಹೆಚ್.ಆರ್.ಎಂ.ಎಸ್ ಹೊರಗೆ ವೇತನ ಸೆಳೆಯುತ್ತಿರುವ ಸಹಾಯಾನುದಾನ ಸಂಸ್ಥೆಗಳಿಗೆ ಆಯವ್ಯಯವನ್ನು ಪರಿಷ್ಕರಿಸಿರುವುದರಿಂದ ಪರಿಷ್ಕೃತ ಆಯವ್ಯಯದಲ್ಲಿ ನವೆಂಬರ್ ತಿಂಗಳುವರೆಗೆ ಪ್ರತಿ ತಿಂಗಳು 1/12 ರಂತೆ ಬಿಡುಗಡೆ ಮಾಡುವುದು.

4. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 91 ವೆಚ್ಚ-7/2020, ದಿನಾಂಕ:30-05-2020ರಂತೆ ಯಾವುದೇ ಹೊಸ ಯೋಜನೆ/ ಕಾರ್ಯಕ್ರಮ/ ಕಾಮಗಾರಿ ಕೈಗೊಳ್ಳುವ ಮುನ್ನ ಆರ್ಥಿಕ ಇಲಾಖೆಯ ಸಹಮತಿಯನ್ನು ಕಡ್ಡಾಯವಾಗಿ ಪಡೆಯಬೇಕೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಗಳು ೨೦೦೦ ಅನ್ನು ಕಡ್ಡಾಯವಾಗಿ ಪಾಲಿಸುವುದು.

6. ಪ್ರತಿಯೊಂದು ಯೋಜನಾ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಮಾಸಿಕ ಕಾರ್ಯಕ್ರಮ ಅನುಷ್ಠಾನ ವೇಳಾಪಟ್ಟಿ (ಎಂಪಿಕ್) ವರದಿಯನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ ಪ್ರತಿ ತಿಂಗಳ 15ನೇ ತಾರೀಖಿನ ಒಳಗೆ ನಿರ್ದೇಶಕರು (ಪಿಎಂಐ) ಯೋಜನಾ ಇಲಾಖೆಗೆ ಕಳುಹಿಸಿಕೊಡುವುದು.

ಕರ್ನಾಟಕ ರಾಜ್ಯಪಾಲರಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್.ಕೆ.ಸುರೇಶ್‌ಬಾಬು )
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ ಶಾಖೆ)

ಇವರಿಗೆ:

1. ಮಹಾಲೇಖಪಾಲರು, (ಎ & ಇ), (ಜಿ&ಎಸ್ ಎಸ್ ಎ), (ಇ &ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಡೀನ್, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಸಿದ್ಧಾರ್ಥನಗರ, ಮೈಸೂರು.
4. ಖಜನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ನಿರ್ದೇಶಕರು, ಮೌಲ್ಯಮಾಪನ ವಿಭಾಗ, ಯೋಜನಾ ಇಲಾಖೆ, ಕೊಠಡಿ ಸಂಖ್ಯೆ:622, ಬಹುಮಹಡಿ ಕಟ್ಟಡ, ಬೆಂಗಳೂರು.
9. ನಿರ್ದೇಶಕರು (ಜನಶಕ್ತಿ ಮತ್ತು ಉದ್ಯೋಗ ವಿಭಾಗ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7/8), ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿ/ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ:ಕಸಂವಾ 194 ಕಸಧ 2020, ಬೆಂಗಳೂರು,
ದಿನಾಂಕ: 22 -07-2020.

## ಅನುಬಂಧ

| ಕ್ರ.ಸಂ | ಲೆಕ್ಕಶೀರ್ಷಿಕೆ | ಯೋಜನೆ/ಕಾರ್ಯಕ್ರಮಗಳ ವಿವರ | 2020-21ನೇ ಸಾಲಿಗೆ ಆಯವ್ಯಯದ ಮಿತಿಯಲ್ಲಿ ಹಂಚಿಕೆ ಮಾಡಿಕೊಳ್ಳಲಾದ ಅನುದಾನ ರೂ.ಲಕ್ಷಗಳಲ್ಲಿ |
|---|---|---|---|
| 1 | ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು | | |
| | 2205-00-101-0-02-002 | ಅಧಿಕಾರಿಗಳ ವೇತನ | 94.00 |
| | 2205-00-101-0-02-003 | ಸಿಬ್ಬಂದಿಗಳ ವೇತನ | 55.00 |
| | 2205-00-101-0-02-011 | ತುಟ್ಟಿ ಭತ್ಯೆ | 36.00 |
| | 2205-00-101-0-02-014 | ಇತರೆ ಭತ್ಯೆ | 26.00 |
| | 2205-00-101-0-02-020 | ವೈದ್ಯಕೀಯ ಭತ್ಯೆ | 1.00 |
| | 2205-00-101-0-02-021 | ವೈದ್ಯಕೀಯ ಹಿಂಭರ್ತಿ | 12.00 |
| | 2205-00-101-0-02-034 | ಗುತ್ತಿಗೆ / ಹೊರಗುತ್ತಿಗೆ ಗುತ್ತಿಗೆ/ಹೊರಗುತ್ತಿಗೆ ಸಿಬ್ಬಂದಿಗಳ ಸಂಭಾವನೆ ವೆಚ್ಚ ಭರಿಸಲು / ಪಾವತಿಸಲು | 16.00 |
| | 2205-00-101-0-02-041 | ಪ್ರಯಾಣ ವೆಚ್ಚಗಳು | 1.00 |
| | 2205-00-101-0-02-051 | ಸಾಮಾನ್ಯ ವೆಚ್ಚಗಳು | 103.00 |
| | 2205-00-101-0-02-052 | ದೂರವಾಣಿ ವೆಚ್ಚ | 1.00 |
| | 2205-00-101-0-02-071 | ಕಟ್ಟಡ ವೆಚ್ಚಗಳು | 2.00 |
| | 2205-00-101-0-02-195 | ಸಾರಿಗೆ ವೆಚ್ಚಗಳು | 2.00 |
| | 2205-00-101-0-02-200 | ನಿರ್ವಹಣೆ | 5.00 |
| | 2205-00-101-0-02-221 | ಸಾಮಗ್ರಿ ಮತ್ತು ಸರಬರಾಜು | 1.00 |
| | | ಒಟ್ಟು | 355.00 |

(ಹೆಚ್.ಕೆ.ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಸಂಸ್ಕೃತಿ ಶಾಖೆ)